**KAHS610022822022**

# 3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚನ್ನರಾಯಪಟ್ಟಣ

**ಉಪಸ್ಥಿತರುಃ** **ಮಧುಶ್ರೀ ಆರ್. ಎಂ.,**

ಎಂ. ಎ., ಎಲ್.ಎಲ್.ಬಿ.

**3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

ದಿನಾಂಕಃ 20ನೇ ಫೆಬ್ರವರಿ 2026

## ಅಸಲು ದಾವಾ ನಂ. O.S./640/2022

**ವಾದಿ ಃ** ರಾಜು ಬಿನ್ ಲೇಟ್ ನಿಂಗೇಗೌಡ
ಸುಮಾರು 52 ವರ್ಷ ವಯಸ್ಸು
ವಾಸಃ ಗೂರನಹಳ್ಳಿ ಬಡಾವಣೆ, 13ನೇ ವಾರ್ಡ್
ಮಂಟಿ ರಸ್ತೆ , ಚನ್ನರಾಯಪಟ್ಟಣ ಟೌನ್
ಹಾಸನ ಜಿಲ್ಲೆ.

**-ವಿರುದ್ಧ-**

**ಪ್ರತಿವಾದಿಗಳುಃ**

1. ತಿಮ್ಮೇಗೌಡ ಬಿನ್ ಲೇಟ್ ಸಣ್ಣ ಬಸವೇಗೌಡ
ಸುಮಾರು 58 ವರ್ಷ ವಯಸ್ಸು

2. ಲಲಿತಮ್ಮ ಕೋಂ ತಿಮ್ಮೇಗೌಡ
ಸುಮಾರು 50 ವರ್ಷ ವಯಸ್ಸು
ವಾಸಃ ಕಬ್ಬಳಿ ಗ್ರಾಮ, ಹಿರೀಸಾವೆ ಹೋಬಳಿ
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.

## ಮಧ್ಯಕಾಲೀನ ಅರ್ಜಿ ಸಂಖ್ಯೆ 4

**ಅರ್ಜಿದಾರರು:** ರಾಜು

**(ವಾದಿ )**

**-ವಿರುದ್ಧ-**

**ಎದುರುದಾರರು:** ತಿಮ್ಮೇಗೌಡ ಮತ್ತು ಇತರರು

**( ಪ್ರತಿವಾದಿಗಳು )**

## :: ಮಧ್ಯಕಾಲೀನ ಅರ್ಜಿ ಸಂಖ್ಯೆ 4 ರ ಮೇಲೆ ಆದೇಶ ::

ಅರ್ಜಿದಾರರು / ವಾದಿಯ ಮಧ್ಯಕಾಲೀನ ಅರ್ಜಿ ಸಂಖ್ಯೆ 4 ನ್ನು ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರ ಸಿ ಪಿ ಸಿ ಅಡಿಯಲ್ಲಿ ಸಲ್ಲಿಸಿ, ಉದ್ದೇಶಿತ ತಿದ್ದುಪಡಿಯಂತೆ ವಾದ ಪತ್ರವನ್ನು ತಿದ್ದುಪಡಿ ಮಾಡಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

### ತಿದ್ದುಪಡಿ

1) ದಾವಾ ಪ್ಯಾರ 4 ರ ನಂತರ 4(ಎ), ಆಗಿ ವಾದಿಯು ಘನ ನ್ಯಾಯಾಲಯದಲ್ಲಿ ಪ್ರತಿವಾದಿಯರುಗಳ ವಿರುದ್ಧ ದಾವಾ ಸಲ್ಲಿಸಿದ ನಂತರ ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ 2 1/2 ಅಡಿ ಅಗಲ, ಉತ್ತರ ದಕ್ಷಿಣವಾಗಿ 75 ಅಡಿ ಉದ್ದದ ಖಾಲಿ ಜಾಗವನ್ನು ಕಾಂಪೌಂಡ್ ನಿರ್ಮಿಸುವುದಕ್ಕಾಗಿ ಬಿಟ್ಟುಕೊಂಡಿದ್ದು, ಆ ರೀತಿ ವಾದಿಯು ಬಿಟ್ಟುಕೊಂಡಿದ್ದ ಜಾಗವನ್ನು ಪ್ರತಿವಾದಿಯರು ಬಲತ್ಕಾರವಾಗಿ ಅಕ್ರಮಿಸಿಕೊಂಡು ವಾದಿಯ ಕಟ್ಟಡದ ಗೋಡೆಗೆ ಹೊಂದಿಕೊಂಡಂತೆ ಅಕ್ರಮವಾಗಿ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿರುತ್ತಾರೆ.

2) ತೀರ್ಪು ಡಿಕ್ರಿಯ 1ನೇ ಪರಿಹಾರದ ಕೊನೆಯಲ್ಲಿ ಹಿಸ್ಸಾ ಹಕ್ಕುದಾರನೆಂದು ಇರುವಲ್ಲಿ ಹಿಸ್ಸಾ ಎಂಬುದನ್ನು ತೆಗೆದು ಹಾಕುವಂತೆಯೂ,

3) ತೀರ್ಪು ಡಿಕ್ರಿಯ 2ನೇ ಪ್ರಾರ್ಥನೆಯನ್ನು ತೆಗೆದು ಹಾಕಿ ಹೊಸದಾಗಿ 2ನೇ ಪ್ರಾರ್ಥನೆಯಾಗಿ ದಾವಾ ಅನುಸೂಚಿ ಸ್ವತ್ತಿನ ಪಶ್ಚಿಮ

ಭಾಗದಲ್ಲಿ 2 1/2 ಅಡಿ ದಾವಾ ಅನುಸೂಚಿ ಸ್ವತ್ತನ್ನು ಅಕ್ರಮಿಸಿಕೊಂಡು ನಿರ್ಮಿಸಿರುವ ಉತ್ತರ ದಕ್ಷಿಣದ ಎರಡು ಭಾಗದ ಕಾಂಪೌಂಡ್ ಗೋಡೆಯನ್ನು ತೆರವು ಮಾಡುವಂತೆ ಮ್ಯಾಂಡೇಟರಿ ನಿರ್ಭಂಧಕಾಜ್ಞೆ ಆದೇಶ ನೀಡಬೇಕಾಗಿಯೂ ,

4) ಹಾಗೆಯೇ ದಾವಾ ಅನುಸೂಚಿ ಸ್ವತ್ತಿನ 2ನೇ ಸಾಲಿನಲ್ಲಿ ಪೂರ್ವ ಪಶ್ಚಿಮ 22.86 ಮೀಟರ್ ಎಂಬುದನ್ನು ತೆಗೆದು ಹಾಕಿ 8.30 ಮೀಟರ್ ಎಂತಲೂ, ಉತ್ತರ ದಕ್ಷಿಣ 8.30 ಮೀಟರ್ ಎಂಬುದನ್ನು ತೆಗೆದು ಹಾಕಿ 22.86 ಎಂತಲೂ ಮತ್ತು,

5) ಷೆಡ್ಯೂಲ್ ಚಕ್ಕುಬಂಧಿಯ ಪಶ್ಚಿಮ ಭಾಗಕ್ಕೆ ವರಲಕ್ಷ್ಮಿ ಎಂಬುದರ ಬದಲಾಗಿ ಪ್ರತಿವಾದಿ ತಿಮ್ಮೇಗೌಡ ಎಂತಲೂ ಎಂದು ತಿದ್ದುಪಡಿಯಾಗಬೇಕಿರುತ್ತದೆ.

**2.** ಅರ್ಜಿದಾರರು ತಮ್ಮ ಪ್ರಮಾಣ ಪತ್ರದಲ್ಲಿ ತಾನು ಈ ದಾವಾವನ್ನು ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಆದೇಶ ಕೋರಿ ಸಲ್ಲಿಸಿದ್ದು, ತನ್ನ ಸ್ವತ್ತಿನ ಪಶ್ಚಿಮ ಭಾಗದಲ್ಲಿ 1ನೇ ಪ್ರತಿವಾದಿಯು ನಿವೇಶನವನ್ನು ಹೊಂದಿದ್ದು , ತಾನು ತನ್ನ ಸ್ವತ್ತಿನಲ್ಲಿ ಬಿಟ್ಟುಕೊಂಡಿರುವ 2 1/2 ಅಡಿ ವಿಸ್ತೀರ್ಣದ ಜಾಗವನ್ನು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ಗೋಡೆಯನ್ನು ನಿರ್ಮಿಸಿರುತ್ತಾರೆ. ಆದ್ದರಿಂದ ಅಕ್ರಮವಾಗಿ ನಿರ್ಮಿಸಿರುವ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಲು ಮ್ಯಾನಡೇಟರಿ ನಿರ್ಬಂಧಕಾಜ್ಞೆ ಆದೇಶ ಹಾಗೂ ದಾವಾ ಅನುಸೂಚಿ ಸ್ವತ್ತಿನ 2ನೇ ಸಾಲಿನಲ್ಲಿ ವಿಸ್ತೀರ್ಣ ಮತ್ತು ಚೆಕ್ಕುಬಂದಿಯನ್ನು ತಿದ್ದುಪಡಿ ಮಾಡಿಕೊಳ್ಳುವುದು ಅವಶ್ಯಕವಾಗಿರುತ್ತದೆ. ಹಾಗಾಗಿ ಅರ್ಜಿದಾರರು ವಾದ ಪತ್ರದ ತಿದ್ದುಪಡಿ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**3.** ಅರ್ಜಿದಾರರು ಸಲ್ಲಿಸಿದ ಅರ್ಜಿಗೆ ಎದುರುದಾರರು/ಪ್ರತಿವಾದಿಗಳು ತಕರಾರನ್ನು ಸಲ್ಲಿಸಿದ್ದು, ತಮ್ಮ ತಕಾರರಿನಲ್ಲಿ ತಾವು ವಾದಿಯ ಜಾಗವನ್ನು ಒತ್ತುವರಿ ಮಾಡಿರುವುದಿಲ್ಲ

ಅರ್ಜಿಯಲ್ಲಿ ಪ್ರಾರ್ಥಿಸಿದಂತೆ ಅನುಮತಿ ನೀಡಿದಲ್ಲಿ ದಾವಾದ ಮೂಲ ಸ್ವರೂಪ ಮತ್ತು ವ್ಯಾಜ್ಯ ಕಾರಣ ಬದಲಾಗುತ್ತದೆ. ಹಾಗಾಗಿ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಮೇತ ವಜಾಗೊಳಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

**4.** ಉಭಯಪಕ್ಷಗಾರರ ವಾದವನ್ನು ಆಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಉಂಟಾಗಿರುತ್ತವೆ.

*1.* ***ಅರ್ಜಿದಾರರು ಸಲ್ಲಿಸಿದ ಮಧ್ಯಕಾಲೀನ ಅರ್ಜಿ ಸಂಖ್ಯೆ: 4 ನ್ನು ಪುರಸ್ಕರಿಸಲು ಸಕಾರಣಗಳಿವೆಯೇ ಎಂಬುದನ್ನು ರುಜುವಾತುಪಡಿಸುತ್ತಾರೆಯೇ ?***

*2.* ***ಯಾವ ಆದೇಶ ?***

**5.** ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ನಿರ್ಣಯ ಈ ಕೆಳಗಿನಂತೆ ಇರುತ್ತವೆ.

ಅಂಶಃ 1 ಃ **ಸಕಾರಾತ್ಮಕವಾಗಿ**

ಅಂಶಃ 2 ಃ ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

**ಕಾರಣಗಳು**

**6.** **ಅಂಶ ಸಂಖ್ಯೆ 1ಃ** ವಾದಿಯು ಈ ದಾವಾವನ್ನು ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧನಾತ್ಮಕ ಆದೇಶ ಕೋರಿ ಸಲ್ಲಿಸಿರುತ್ತಾರೆ. ಪ್ರಸ್ತುತ ದಾವೆಯು ವಾದಿಯ ವಿಚಾರಣೆಗೆಂದು ನಿಗಧಿಯಾಗಿದ್ದಾಗ ವಾದಿಯು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**7.** ಪ್ರಸ್ತಾಪಿತ ತಿದ್ದುಪಡಿಯಲ್ಲಿ ನಮೂದಿಸಿರುವ ವಿಚಾರಗಳು ಈ ದಾವಾ ಸಲ್ಲಿಸಿದ ನಂತರ ಸಂಭವಿಸಿದ್ದು, ಈ ದಾವಾದಲ್ಲಿ ವಾದಿಯು ಸೂಕ್ತ ಪರಿಹಾರ ಹೊಂದಲು ಪ್ರಸ್ತಾಪಿತ ತಿದ್ದುಪಡಿಯಂತೆ ವಾದ ಪತ್ರವನ್ನು ತಿದ್ದುಪಡಿ ಮಾಡುವುದು ಅವಶ್ಯಕವಾಗಿದ್ದು, ಪ್ರಸ್ತಾಪಿತ

ತಿದ್ದುಪಡಿಗಳಿಂದ ದಾವಾದ ವ್ಯಾಜ್ಯ ಕಾರಣ ಮತ್ತು ಸ್ವರೂಪ ಬದಲಾಗದೆ ಇರುವುದರಿಂದ ಪ್ರಸ್ತಾಪಿತ ತಿದ್ದುಪಡಿಯಂತೆ ವಾದಪತ್ರವನ್ನು ತಿದ್ದುಪಡಿ ಮಾಡಲು ವಾದಿಯ ಪರ ವಕೀಲರು ಪ್ರಾರ್ಥಿಸಿರುತ್ತಾರೆ.

**8.** ಪ್ರಸ್ತಾಪಿತ ತಿದ್ದುಪಡಿಯು ದಾವಾ ಸ್ವರೂಪ ಮತ್ತು ವ್ಯಾಜ್ಯ ಕಾರಣವನ್ನು ಬದಲಾಯಿಸುವುದರಿಂದ ಈ ಹಂತದಲ್ಲಿ ಪ್ರಸ್ತಾಪಿತ ತಿದ್ದುಪಡಿಯನ್ನು ಪುರಸ್ಕರಿಸದರೆ ಪ್ರತಿವಾದಿಗಳಿಗೆ ಅನವಶ್ಯಕ ತೊಂದರೆ ಆಗುವುದರಿಂದ ಅರ್ಜಿಯನ್ನು ತಿರಸ್ಕರಿಸಬೇಕೆಂದು ಪ್ರತಿವಾದಿಗಳ ಪರ ವಕೀಲರು ಪ್ರಾರ್ಥಿಸಿರುತ್ತಾರೆ.

**9.** ಈ ಹಂತದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17ನ್ನು ಉಲ್ಲೇಖಿಸುವುದು ಸೂಕ್ತವಾಗಿದೆ.

> ***ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17*** *ರ ಪ್ರಕಾರ, ವಾದಗಳ ತಿದ್ದುಪಡಿ (Amendment of pleadings) ನ್ಯಾಯೋಚಿತವಾಗಬಹುದಾದ ರೀತಿಯಲ್ಲಿ ಮತ್ತು ಅಂತಹ ನಿಬಂಧನೆಗಳ ಮೇಲೆ ಯಾವನೇ ಪಕ್ಷಕಾರನ ವಾದ ಪ್ರತಿವಾದ ಪತ್ರವನ್ನು ಬದಲಾಯಿಸಲು ಅಥವಾ ತಿದ್ದುಪಡಿ ಮಾಡಲು ವ್ಯವಹರಣೆಯ ಯಾವುದೇ ಹಂತದಲ್ಲಿ ನ್ಯಾಯಾಲಯವು ಅವನಿಗೆ ಅವಕಾಶ ಕೊಡಬಹುದು ಮತ್ತು ಪಕ್ಷಕಾರರ ನಡುವೆ ವಾದದಲ್ಲಿರುವ ನಿಜವಾದ ಪ್ರಶ್ನೆಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂತಹ ಎಲ್ಲ ದುರಸ್ತುಗಳನ್ನು ಮಾಡತಕ್ಕದ್ದು.*

**10.** ವಾದಿಯು ಶಾಶ್ವತ ನಿರ್ಬಂಧನಾತ್ಮಕ ಆದೇಶ ಕೋರಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. ಪ್ರಸ್ತುತದಲ್ಲಿ ವಾದಿಯು 1ನೇ ಪ್ರತಿವಾದಿಯು ವಾದಿಯ 2 1/2 ಅಡಿ ಸ್ವತ್ತನ್ನು ಒತ್ತುವರಿ ಮಾಡಿಕೊಂಡು ಕಾಂಪೌಂಡ್ ನಿರ್ಮಿಸಿರುವುದರಿಂದ ತಿದ್ದುಪಡಿ ಕೋರಿರುವುದಾಗಿ ಪ್ರಾರ್ಥಿಸಿರುತ್ತಾರೆ. ಪ್ರಸ್ತಾಪಿತ ತಿದ್ದುಪಡಿಯು ದಾವಾ ವ್ಯಾಜ್ಯ ಕಾರಣವನ್ನು ಬದಲಾಯಿಸುತ್ತಿದ್ದರೂ ಸಹ

ವಾದಿಯು ಕಾಂಪೌಂಡ್ ತೆರವುಗೊಳಿಸಲು ಪ್ರಾರ್ಥಿಸುತ್ತಿರುವುದರಿಂದ ನಿರ್ದೇಶನಾತ್ಮಕ ನಿರ್ಬಂಧಕಾಜ್ಞೆ ಕೋರಿ ತಿದ್ದುಪಡಿ ಕೋರಿರುತ್ತಾರೆ. ಈ ದಾವೆ ವಿಚಾರಣಾ ಹಂತದಲ್ಲಿದ್ದರೂ ಸಹ ಈ ದಾವಾವನ್ನು ಸೂಕ್ತ ರೀತಿಯಲ್ಲಿ ನಿರ್ಣಯಿಸಲು ಪ್ರಸ್ತಾಪಿತ ತಿದ್ದುಪಡಿಗಳು ಅವಶ್ಯಕವಾಗಿದೆ. ಅಲ್ಲದೆ ಪ್ರಸ್ತಾಪಿತ ತಿದ್ದುಪಡಿಯಂತೆ ದಾವಾವನ್ನು ರುಜುವಾತುಪಡಿಸುವ ಹೊಣೆಗಾರಿಕೆಯು ವಾದಿಯ ಮೇಲೆ ಇರುತ್ತದೆ. ಬಹು ಕಾನೂನು ಪ್ರಕ್ರಿಯೆಗಳಿಂದ ಈ ದಾವಾವನ್ನು ತಡೆಯುವ ನಿಟ್ಟಿನಲ್ಲಿ ಈ ಅರ್ಜಿಯನ್ನು ಪುರಸ್ಕರಿಸಬಹುದಾಗಿರುತ್ತದೆ. ಹಾಗಾಗಿ **ಅಂಶ ಸಂಖ್ಯೆ 1ನ್ನು ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

11. **ಅಂಶ ಸಂಖ್ಯೆ 2ಃ** ಅಂಶ ಸಂಖ್ಯೆ 1 ರಲ್ಲಿ ತಿಳಿಸಿರುವ ಕಾರಣಗಳಿಗಾಗಿ ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ವಾದಿ / ಅರ್ಜಿದಾರರು ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 6 ನಿಯಮ 17 ಸಹವಾಚಕ ಕಲಂ 151 ರಡಿಯಲ್ಲಿ ಸಲ್ಲಿಸಿರುವ ಮಧ್ಯಕಾಲೀನ ಅರ್ಜಿ ಸಂಖ್ಯೆ 4ನ್ನು ರೂ.500/- ರ ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ.

ಅರ್ಜಿಯಲ್ಲಿ ಪ್ರಾರ್ಥಿಸಿದಂತೆ ವಾದ ಪತ್ರವನ್ನು ತಿದ್ದುಪಡಿ ಮಾಡಿ, ತಿದ್ದುಪಡಿ ವಾದಪತ್ರವನ್ನು ಸಲ್ಲಿಸುವಂತೆ ನಿರ್ದೇಶಿಸಲಾಗಿದೆ.

*(ಈ ತೀರ್ಪನ್ನು ಶೀಘ್ರಲಿಪಿಗಾರ್ತಿಗೆ ಉಕ್ತಲೇಖನವನ್ನು ಕೊಟ್ಟು, ಆಕೆಯು ಗಣಕ ಯಂತ್ರದ ಮೇಲೆ ಬೆರಳಚ್ಚು ಮಾಡಿದ ನಂತರ ತಪ್ಪಿದ್ದಲ್ಲಿ ತಿದ್ದಿ ಇಂದು **ದಿನಾಂಕ** 20ನೇ ಫೆಬ್ರವರಿ 2026 ರಂದು ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

MADHUSHREE R M

Digitally signed by MADHUSHREE R M
Date: 2026.03.02 11:56:10 +0530

**(ಮಧುಶ್ರೀ ಆರ್.ಎಂ)**
**3ನೇ ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.**